# ಜಾಜಿಮಲ್ಲಿಗೆ





ಸಾಮಾನ್ಯ ಮಲ್ಲಿಗೆಗಿಂತ ಈ ಜಾಜಿ ಮಲ್ಲಿಗೆಯಲ್ಲಿ ಔಷಧೀಯ ಗುಣ ಹೆಚ್ಚು. ಜಾಜಿಯ ಸುಗಂಧದೆಣ್ಣೆಗೆ ಹೊರ ದೇಶಗಳಲ್ಲೂ ಬೇಡಿಕೆ ಇದೆ.

■ ಚಿತ್ರ-ಬರಹ:
**ಸಹನಾ ಕಾಂತಬೈಲು**

ಹೆಂಗಳೆಯರ ಮುಡಿ ಏರಿ ನಗುವ ಮಲ್ಲಿಗೆಯಲ್ಲಿ ಅನೇಕ ವಿಧಗಳಿವೆ. ಅವುಗಳಲ್ಲಿ ಒಂದು ಜಾಜಿ ಮಲ್ಲಿಗೆ. ಈ ಹೂವು ನಸುಗೆಂಪು ಮಿಶ್ರಿತ ಬಿಳಿ ಬಣ್ಣ ಹೊಂದಿದ್ದು ಬಲು ಆಕರ್ಷಕ. ಸಾಮಾನ್ಯ ಮಲ್ಲಿಗೆಗಿಂತ ಮೃದು. ಔಷಧೀಯ ಗುಣ ಹೆಚ್ಚು. ಸುವಾಸನೆಯೂ ಹೆಚ್ಚು.

ಜಾಜಿಯ ತವರೂರು ಭಾರತ. ಇದರ ವೈಜ್ಞಾನಿಕ ಹೆಸರು ಜಾಸ್ಮಿನಮ್ ಗ್ರ್ಯಾಂಡಿಫ್ಲೋರಮ್. ಬಳ್ಳಿಯ ಹೂವಾದ ಇದು ಸುಲಭವಾಗಿ ಬೇಲಿ, ಚಪ್ಪರಗಳಿಗೆ ಹಬ್ಬುತ್ತದೆ. ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಹೇರಳವಾಗಿ ಹೂ ಬಿಡುತ್ತದೆ. ಜಾಜಿ ಹೂವಿನಿಂದ ಎಣ್ಣೆ ತೆಗೆಯುತ್ತಾರೆ. ಈ ಸುಗಂಧಿತ ಎಣ್ಣೆಗೆ ಹೊರದೇಶಗಳಲ್ಲೂ ಬೇಡಿಕೆ ಇದೆ.

**ಸಸ್ಯಾಭಿವೃದ್ಧಿ :** ಚೆನ್ನಾಗಿ ಬಿಸಿಲು ಬೀಳುವ ಯಾವುದೇ ಗುಣದ ಮಣ್ಣಿನಲ್ಲಿ ಜಾಜಿ ಮಲ್ಲಿಗೆಯನ್ನು ಬೆಳೆಸಬಹುದು. ಕಾಂಡದ ತುಂಡುಗಳನ್ನು ನೆಟ್ಟು ಸಸ್ಯಾಭಿವೃದ್ಧಿ ಮಾಡುತ್ತಾರೆ. ನಾಟಿ ಮಾಡಿದ ಎರಡು ವರ್ಷಗಳಲ್ಲಿ ಹೂ ಕೊಡಲಾರಂಭಿಸುತ್ತದೆ. ರೋಗ, ಕೀಟ ಬಾಧೆ ಕಡಿಮೆ. ಹೂ ಬಿಡುವ ಸಮಯದಲ್ಲಿ ಸ್ವಲ್ಪ ಕೊಟ್ಟಿಗೆ ಗೊಬ್ಬರ ಕೊಟ್ಟರೆ ಸಾಕು. ಒಂದು ಬಳ್ಳಿಯಿಂದ 15ರಿಂದ 20 ವರ್ಷಗಳವರೆಗೆ ಹೂ ಪಡೆಯಬಹುದು.

**ಔಷಧೀಯ ಗುಣಗಳು:** ಜಾಜಿಯ ಎಲೆ, ಹೂ, ಬೇರು, ಕಾಂಡ ಎಲ್ಲವೂ ಔಷಧೀಯ ಗುಣ ಹೊಂದಿದೆ. ಸುಟ್ಟಗಾಯ, ಬಿದ್ದು ಆದ ಗಾಯಗಳಿಗೆ ಜಾಜಿ ಎಲೆಯ ರಸ 4 ಚಮಚ, ಎಣ್ಣೆ ಒಂದು ಚಮಚ, ಅರಸಿನ ಪುಡಿ ಅರ್ಧ ಚಮಚ ಬೆರೆಸಿ ಬಿಸಿ ಮಾಡಿ ಲೇಪಿಸಬೇಕು. ಬಾಯಿ ಹುಣ್ಣಿಗೆ ಜಾಜಿ ಎಲೆಯನ್ನು ಚೆನ್ನಾಗಿ ಜಗಿದು ರಸವನ್ನು ನುಂಗಬೇಕು. ಕಾಲಿನಲ್ಲಿ ಆಣಿಗಳಾದರೆ ಜಾಜಿ ಎಲೆಯನ್ನು ಅರೆದು ಆಣಿಗಳಿಗೆ ರಾತ್ರಿ ಕಟ್ಟಿಕೊಂಡು ಬೆಳಿಗ್ಗೆ ತೊಳೆಯಬೇಕು. ಎಳೆಯ ಮಕ್ಕಳಿಗೆ ಮೊಲೆ ಹಾಲೂಡಿಸುವುದನ್ನು ಬಿಡಿಸಲು ಬಯಸುವ ತಾಯಂದಿರು ಜಾಜಿ ಹೂವಿನ ಹಾರವನ್ನು ಸ್ತನಗಳಿಗೆ ಸುತ್ತಿಕೊಳ್ಳಬೇಕು ಅಥವಾ ಹೂಗಳನ್ನು ಅರೆದು ಸ್ತನಗಳಿಗೆ ಲೇಪಿಸಿಕೊಳ್ಳಬೇಕು. ಹೂವು ಎದೆ ಹಾಲನ್ನು ಇಂಗಿಸುತ್ತದೆ.

ಕಿವಿ ಸೋರುವುದು ಮತ್ತು ಕಿವಿ ನೋವಿಗೂ ಜಾಜಿ ರಾಮಬಾಣ. ಜಾಜಿ ಎಲೆಯ ರಸಕ್ಕೆ ಸಮಭಾಗ ಎಳ್ಳೆಣ್ಣೆ ಬೆರೆಸಿ ಬಿಸಿ ಮಾಡಿ 3–4 ಹನಿಗಳಷ್ಟನ್ನು ಕಿವಿಗೆ ದಿನಕ್ಕೆ ಮೂರು ಬಾರಿ ಬಿಟ್ಟರೆ ಖಂಡಿತಾ ಗುಣಮುಖರಾಗುತ್ತಾರೆ. ಮಕ್ಕಳಲ್ಲಿ ಕಜ್ಜಿ ಇದ್ದರೆ ಜಾಜಿ ಹೂವಿನಿಂದ ಇಲ್ಲವೇ ಎಲೆಯಿಂದ ತಯಾರಿಸಿದ ಎಣ್ಣೆಯನ್ನು ಹಚ್ಚಬೇಕು. ಹೀಗೆ ಹಲವಾರು ಔಷಧೀಯ ಗುಣಗಳನ್ನು ಹೊಂದಿರುವ ಜಾಜಿ ಮಲ್ಲಿಗೆ ನಿಜಕ್ಕೂ ಅಪೂರ್ವ ವನಸ್ಪತಿಯೇ ಸರಿ. ●